ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನ.ರಾ.ಚೌಕ, ಬೆಂಗಳೂರು-560002

ದಿನಾಂಕ:27-08-2018ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

ವಿಷಯ ಸಂಖ್ಯೆ: ಸಾನ್ಯಾಸ್ಥಾಸ/ಪಿಆರ್/06/2018-19

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಮಂಡಿಸಲಾಗಿರುವ ಟಿಪ್ಪಣಿ

1. 2018-19ನೇ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ಕಲ್ಯಾಣ ವಿಭಾಗದ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ನಿಗದಿಪಡಿಸಿರುವ ಅನುಧಾನಗಳ ವಿವರಗಳು:

ಮಾನ್ಯ ಆಯುಕ್ತರ ರವರ ಟಿಪ್ಪಣಿ ದಿನಾಂಕ:21-08-2018 ರಂತೆ ಉಲ್ಲೇಖಿತ ಆದೇಶಗಳನ್ವಯ 2018-19ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವು ಉಲ್ಲೇಖ (4)ರಂತೆ ಅನುಮೋದನೆಗೊಂಡಿರುತ್ತದೆ. ಸದರಿ ಆಯವ್ಯಯದಲ್ಲಿ (ಅ) ಶೇ.24.10ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/32/ಪಿಎನ್‌ಜಿ/2015 ದಿನಾಂಕ:30-07-2015 ರಲ್ಲಿ ಸೂಚಿಸಿರುವಂತೆ - ಪರಿಶಿಷ್ಟ ಜಾತಿ ವರ್ಗದವರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡ ವರ್ಗದವರಿಗೆ ಶೇ.6.95 ನಿಗಧಿಪಡಿಸಲಾಗಿದೆ. (ಆ)ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರ ಕಲ್ಯಾಣ ಕಾರ್ಯಕ್ರಮ/ ಕಾಮಗಾರಿಗಳಿಗೆ ಶೇ.7ಖ25 ನಿಗಧಿಪಡಿಸಲಾಗಿದೆ. (ಇ)ಆರ್ಥಿಕವಾಗಿ ಹಿಂದುಳಿದ ವರ್ಗಗದವರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು (ಈ)ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಸಾಮಾನ್ಯ ವರ್ಗ, ಹಿರಿಯ ನಾಗರಿಗೆ ಕಲ್ಯಾಣ ಕಾರ್ಯಕ್ರಮಗಳು, ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು, ಮಹಿಳಾ ವರ್ಗದವರ ಹಾಗೂ ಟ್ರಾನ್ಸ್‌ಜೆಂಡರ್‌ಗಳ ಕಲ್ಯಾಣ ಕಾರ್ಯಕ್ರಮಗಳಿಗೆ 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಚಾಲ್ತಿ ಅನುದಾನದ ವಿವರಗಳನ್ನು ಅನುಬಂಧ-01ರಲ್ಲಿ ಲಗತ್ತಿಸಿದೆ.

2.ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಗಳು:

2017-18ನೇ ಸಾಲಿನಲ್ಲಿ ಖರ್ಚಾಗದೇ ಉಳಿದಿರುವ ಅರ್ಹ ಚಾಲ್ತಿ ಅನುದಾನವನ್ನು 2018-19ನೇ ಸಾಲಿಗೆ ನಿಯಮಾವಳಿಯಂತೆ ಮುಂದುವರೆಸುವ ಬಗ್ಗೆ:

2017-18ನೇ ಸಾಲಿನ ಅನುಧಾನದ ಹಂಚಿಕೆ ಮತ್ತು ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳ ಕ್ರಿಯಾಯೋಜನೆಗೆ ದಿನಾಂಕ:10-11-2017ರಂದು ಮಾನ್ಯ ಆಯುಕ್ತರವರ ಅನುಮೋದನೆಯಾಗಿದ್ದು, ಈ ಆಧಾರದ ಮೇಲೆ 2017-18ನೇ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿರುವ ಅನುದಾನಕ್ಕೆ ಅನುಗುಣವಾಗಿ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸಿದ್ಧತೆ ಮಾಡಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದ್ದು 2017-18ನೇ ಸಾಲಿನ ಆರ್ಥಿಕ ವರ್ಷ ಈಗಾಗಲೇ ಮುಕ್ತಾಯಗೊಂಡಿದ್ದು ಕಾರ್ಯಕ್ರಮಗಳು ಅನುಷ್ಠಾನದ ಕೊನೆಯ ಹಂತದಲ್ಲಿರುತ್ತದೆ.

ಮೇಲ್ಕಂಡಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮತ್ತು ಮಾನ್ಯ ಆಯುಕ್ತರ ಆದೇಶದಂತೆ 2017-18ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕೇಂದ್ರ/ವಲಯ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದ್ದು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಸರಬರಾಜು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿದೆ. ಅಲ್ಲದೇ ನಿಯಮಾನುಸಾರ ಮಾರ್ಗಸೂಚಿಯನ್ವಯ ಟೆಂಡರ್ ರಹಿತ ಕಾರ್ಯಕ್ರಮಗಳಾದ ಶಾಲಾ/ಕಾಲೇಜು ಶುಲ್ಕಗಳ ಮರುಪಾವತಿ ನೀಡುವ ಕಾರ್ಯಕ್ರಮಗಳಿಗೂ ಸಹಾ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಸೌಲಭ್ಯಗಳನ್ನು ಏತರಿಸುವ ಹಂತದಲ್ಲಿರುತ್ತದೆ. ಆದುದರಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು 2017-18ನೇ ಸಾಲಿನ ಕ್ರಿಯಾಯೋಜನೆಯಲ್ಲಿನ ಅವಕಾಶಗಳು, ಕಾರ್ಯಕ್ರಮ /ಅನುದಾನದ ಲಭ್ಯತೆಯ ಮೇರೆಗೆ 2018-19ನೇ ಸಾಲಿಗೆ ಮುಂದುವರೆಸಿಕೊಂಡು, ಸದರಿ ಕಾರ್ಯಕ್ರಮಗಳಿಗೆ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

2017–18ನೇ ಸಾಲಿನ ಆಯವ್ಯಯದ ಅನುದಾನದಿಂದ ಮುಂದುವರಿಸಲಾದ ಅರ್ಹ ಉಳಿಕೆ ಅನುದಾನದಲ್ಲಿ ವೆಚ್ಚ ಭರಿಸಲು ಅನುಮೋದನೆ ಕೋರಿದೆ.

2018–19ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾಯೋಜನೆ ರೂಪಿಸುವ ಸಂಬಂಧ ಉಲ್ಲೇಖ–5 ರಂತೆ ದಿನಾಂಕ 02–08–2018 ರಂದು ಉಪ ಆಯುಕ್ತರು (ಕಲ್ಯಾಣ)ರವರ ಅಧ್ಯಕ್ಷತೆಯಲ್ಲಿ ಈ ಹಿಂದಿನ ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಗಿ ಹೆಚ್ಚು ಬೇಡಿಕೆ ಇರುವ ಕಾರ್ಯಕ್ರಮಗಳನ್ನು ಉಳಿಸಿಕೊಂಡು, ಬೇಡಿಕೆ ಇಲ್ಲದಿರುವ ಕೆಲವು ಕಾರ್ಯಕ್ರಮಗಳನ್ನು ಕೈಬಿಸಲಾಗಿದೆ.

2018–19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಕೈಬಿಡಲಾಗಿರುವ ಕಾರ್ಯಕ್ರಮಗಳ ವಿವರ

ಕ್ರ.ಸಂ.	ಲೀ-ಕೋಡ್	ಕಾರ್ಯ ಕ್ರಮದ ಹೆಸರು
1.	ಪಿ–2020	ಸಣ್ಣ ಉದ್ದಿಮೆದಾರರಿಗೆ ಸಹಾಯಧನ
2.	ಪಿ–2020	ಎಲ್.ಎಲ್.ಬಿ ಪದವಿ ಹೊಂದಿದ್ದು, ವೃತ್ತಿನಿರತ ವಕೀಲರುಗಳಿಗೆ ಸಹಾಯಧನ ನೀಡುವುದು. ವೃತ್ತಿ ಪ್ರಾರಂಭಿಸಲು ನೋಂದಣಿ ಮಾಡಿದ ವರ್ಷದಲ್ಲಿ ಅರ್ಜಿ ಸಲ್ಲಿಸಿದರೆ ಆನ್‌ಲೈನ್ ಕಾನೂನು ಪುಸ್ತಕ ಭಂಡಾರಕ್ಕೆ 5 ವರ್ಷಗಳ ಅವಧಿಗೆ ನೀಡಬೇಕಾದ ಚಂದಾ ಶುಲ್ಕವನ್ನು ನೇರವಾಗಿ ಪಾವತಿಸುವುದು.
3.	ಪಿ–2020	ವೈಯಕ್ತಿಕ ಅಭ್ಯಾಸ ಪ್ರಾರಂಭಿಸಿರುವ ವೈದ್ಯರಿಗೆ ಪದವಿಯಲ್ಲಿ ತೇರ್ಗಡೆಯಾದ ಅಲೋಪತಿ ವೈದ್ಯ/ ಆಯುರ್ವೇದ/ಹೋಮಿಯೋಪತಿ/ಯುನಾನಿ/ಸಿದ್ಧ ಮತ್ತು ನಿಸರ್ಗ ಚಿಕಿತ್ಸೆ/ಯೋಗ ವೃತ್ತಿ ಪ್ರಾರಂಭಿಸಲು ಅವರವರ ಸಂಬಂಧಪಟ್ಟ ಕೌನ್ಸಿಲ್/ಅಸೋಸಿಯೇಷನ್‌ಗಳಲ್ಲಿ ನೋಂದಾಯಿಸಿಕೊಂಡ ಒಂದು ವರ್ಷದ ಒಳಗಾಗಿ ವೈದ್ಯಕೀಯ ಸಲಕರಣೆ ಪಡೆದುಕೊಳ್ಳಲು ಸಹಾಯಧನ ನೀಡುವುದು.
4.	ಪಿ–2022	ಶಸ್ತ್ರ ಚಿಕಿತ್ಸೆ/ ವೈದ್ಯಕೀಯ ಸೇವೆಗಳು, ದೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಬೀರ ಸ್ವರೂಪದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯ.
5	ಪಿ–2023	ಪ್ರತಿಷ್ಠಿತ ವಸತಿ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಬಿಎ/ಬಿಕಾಂ/ಬಿಎಸ್‌ಸಿ ಪದವಿ ವ್ಯಾಸಂಗಮಾಡುವುದರೊಂದಿಗೆ ಕೆಪಿಎಸ್‌ಸಿ/ಯುಪಿಎಸ್‌ಸಿ ಯಿಂದ ನಡೆಸಲಾಗುವ ಸಿವಿಲ್ ಸೇವೆಗಳ ಪರೀಕ್ಷೆಗಳಿಗೆ (KAS/IAS) Integrated courses ಗಳಿಗೆ ತರಭೇತಿ ಪಡೆಯಲು ಆರ್ಥಿಕ ಸಹಾಯ
6.	ಪಿ–1936	ಸಣ್ಣ ಉದ್ದಿಮೆದಾರರಿಗೆ ಸಹಾಯಧನ
7.	ಪಿ–1936	ಎಲ್.ಎಲ್.ಬಿ ಪದವಿ ಹೊಂದಿದ್ದು, ವೃತ್ತಿನಿರತ ವಕೀಲರುಗಳಿಗೆ ಸಹಾಯಧನ ನೀಡುವುದು. ವೃತ್ತಿ ಪ್ರಾರಂಭಿಸಲು ನೋಂದಣಿ ಮಾಡಿದ ವರ್ಷದಲ್ಲಿ ಅರ್ಜಿ ಸಲ್ಲಿಸಿದರೆ ಆನ್‌ಲೈನ್ ಕಾನೂನು ಪುಸ್ತಕ ಭಂಡಾರಕ್ಕೆ 5 ವರ್ಷಗಳ ಅವಧಿಗೆ ನೀಡಬೇಕಾದ ಚಂದಾ ಶುಲ್ಕವನ್ನು ನೇರವಾಗಿ ಪಾವತಿಸುವುದು.
8.	ಪಿ–1936	ವೈಯಕ್ತಿಕ ಅಭ್ಯಾಸ ಪ್ರಾರಂಭಿಸಿರುವ ವೈದ್ಯರಿಗೆ ಪದವಿಯಲ್ಲಿ ತೇರ್ಗಡೆಯಾದ ಅಲೋಪತಿ ವೈದ್ಯ/ ಆಯುರ್ವೇದ/ಹೋಮಿಯೋಪತಿ/ಯುನಾನಿ/ಸಿದ್ಧ ಮತ್ತು ನಿಸರ್ಗ ಚಿಕಿತ್ಸೆ/ಯೋಗ ವೃತ್ತಿ ಪ್ರಾರಂಭಿಸಲು ಅವರವರ ಸಂಬಂಧಪಟ್ಟ ಕೌನ್ಸಿಲ್/ಅಸೋಸಿಯೇಷನ್‌ಗಳಲ್ಲಿ ನೋಂದಾಯಿಸಿಕೊಂಡ ಒಂದು ವರ್ಷದ ಒಳಗಾಗಿ ವೈದ್ಯಕೀಯ ಸಲಕರಣೆ ಪಡೆದುಕೊಳ್ಳಲು ಸಹಾಯಧನ ನೀಡುವುದು.
9.	ಪಿ–1936	ಶಸ್ತ್ರ ಚಿಕಿತ್ಸೆ/ ವೈದ್ಯಕೀಯ ಸೇವೆಗಳು, ದೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಬೀರ ಸ್ವರೂಪದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯ.
10.	ಪಿ–1936	ಪಿ.ಎಚ್.ಡಿ/ಎಂ.ಫಿಲ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಂಶೋಧನಾ ಪ್ರಬಂಧಗಳನ್ನು ಮಂಡಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ಆಯೋಜಿಸುವ ಸಮಾವೇಶ/ಕಾರ್ಯಗಾರಗಳಲ್ಲಿ ಭಾಗವಹಿಸಲು ನಾಸ್ತವಿಕ ವೆಚ್ಚವನ್ನು ಭರಿಸುವುದು.
11.	ಪಿ–1936	8ನೇ ತರಗತಿಯಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಣೆ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

12.	ಪಿ-1936	ಅಭಿವೃದ್ಧಿ ಉಪಯುಕ್ತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು(ನಲ್ಮ್ ಯೋಜನೆಯ ಮಾರ್ಗಸೂಚಿನ್ವಯ ಸಕ್ಷಮ ಪಾಧಿಕಾರದ ಅನುಮೋದನೆಯೊಂದಿಗೆ ತರಬೇತಿಯನ್ನು ನೀಡಲು ಕ್ರಮ ವಹಿಸುವುದು.
13.	ಪಿ-3313	ಒಳಚರಂಡಿ ಸ್ವಚ್ಚಗೊಳಿಸುವಾಗ ಅಪಘಾತವಾದ ವ್ಯಕ್ತಿಗಳು ಮರಣ ಹೊಂದಿದ್ದಲ್ಲಿ ಸರ್ಕಾರ ನಿಗದಿಪಡಿಸಿರುವ ಪರಿಹಾರ ಮೊತ್ತವನ್ನು ಭರಿಸುವುದು.

2018-19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಹೊಸದಾಗಿ ಸೇರ್ಪಡೆ ಮಾಡಿರುವ ಕಾರ್ಯಕ್ರಮಗಳ ವಿವರ

ಕ್ರ.ಸಂ.	ಪಿ-ಕೋಡ್	ಕಾರ್ಯ ಕ್ರಮದ ಹೆಸರು
1	ಪಿ-2022	ಬ್ಯೂಟಿ ಪಾರ್ಲರ್ ತರಬೇತಿ ಪಡೆಯಲು/ವೃತ್ತಿ ಪ್ರಾರಂಭಿಸಲು ಧನಸಹಾಯ
	ಪಿ-2022	ಫ್ಯಾಷನ್ ಡಿಸೈನಿಂಗ್ ತರಬೇತಿ ಪಡೆಯಲು/ವೃತ್ತಿ ಪ್ರಾರಂಭಿಸಲು ಗರಿಷ್ಠ ರೂ 50,000/-ಗಳ ಧನಸಹಾಯ
2	ಪಿ-1938	ಸರ್ಕಾರಿ ಅಥವಾ ಖಾಸಗಿ ಶಾಲಾ/ಕಾಲೇಜುಗಳಲ್ಲಿ 1ನೇ ತರಗತಿಯಿಂದ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ವಿಶೇಷಚೇತನ ವಿದ್ಯಾರ್ಥಿಗಳಿಗೆ ಹಾಗೂ ವಿಶೇಷ ಚೇತನರ ಕುಟುಂಬದ ಒಂದು ಮಗ ಅಥವಾ ಮಗಳಿಗೆ ಶುಲ್ಕ ಮರುಪಾವತಿ (ಪಾವತಿಸಿರುವ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮೊತ್ತ ಗರಿಷ್ಠ ರೂ.50,000/-ಮೀರದಂತೆ)
3	ಪಿ-1938	ವಿಶೇಷಚೇತನರಿಗೆ Automated Wheel Chair ವಿತರಿಸುವುದು
4	ಪಿ-1938	Solar Powered Petty Shop
5	ಪಿ-1938	ಅಂಗವಿಕಲರ ಹಕ್ಕುಗಳ ಕಾಯ್ದೆ 2016ರ ಅನ್ವಯ ಗುರುತಿಸಿರುವ 21 ಅಂಗವೈಕಲ್ಯಗಳನ್ನು ಸರಿಪಡಿಸುವ ಸಲುವಾಗಿ ನಡೆಸುವ ಶಸ್ತ್ರ ಚಿಕಿತ್ಸೆಗೆ ಗರಿಷ್ಠ ರೂ.50,000/-ಗಳ ವರೆಗೆ ಧನಸಹಾಯ
6	ಪಿ-1938	ಬುದ್ಧಿಮಾಂದ್ಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ
	ಪಿ-1938	ಈಗಾಗಲೇ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನ ಬಳಕೆಯಾಗದೆ ಉಳಿದಿದ್ದಲ್ಲಿ ಒಟ್ಟಾರೆ ಸದರಿ ಪಿ-ಕೋಡ್‌ನ ಶೇ.20ರಷ್ಟು ಅನುದಾನವನ್ನು ಪಾಲಿಕೆಯ ಕಟ್ಟಡಗಳಲ್ಲಿ ರ್‍ಯಾಂಪ್ ನಿರ್ಮಿಸುವುದು, ಪಾಲಿಕೆಯ ಪಾರ್ಕ್‌ಗಳಲ್ಲಿ ವಿಕಲಚೇತನರ ಉಪಯೋಗಕ್ಕಾಗಿ ಪ್ರತ್ಯೇಕ ಶೌಚಾಲಯ ನಿರ್ಮಿಸುವುದು ಹಾಗೂ ಇತರ ವಿಕಲಚೇತನ ಸ್ನೇಹಿ ಕಾಮಗಾರಿಗಳನ್ನು CPWD ಮಾರ್ಗಸೂಚಿಯಂತೆ ಕೈಗೊಳ್ಳುವುದು (ಕಾಮಗಾರಿ ವಿಭಾಗದಿಂದ ನಿರ್ವಹಿಸುವುದು)
8	ಪಿ-1938	ಶೇ.75 ಕ್ಕಿಂತ ಹೆಚ್ಚು ಅಂಗವೈಕಲ್ಯಹೊಂದಿರುವ ವಿಶೇಷ ಚೇತನರ ಕುಟುಂಬದ ಒಬ್ಬ ಸದಸ್ಯರಿಗೆ ಸ್ವಯಂ ಉದ್ಯೋಗಕ್ಕಾಗಿ ರೂ. 80,000 ದಿಂದ ರೂ. 1,00000/- ಗಳ ವರೆಗೆ ಆರ್ಥಿಕ ಸಹಾಯ.
9	ಪಿ-1938	ಶೇ.45 ಕ್ಕಿಂತ ಹೆಚ್ಚು ವಿಕಲತೆ ಹೊಂದಿರುವ ಪೋಷಕರ ಮಕ್ಕಳಿಗೆ ಹಾಗೂ ವಿಶೇಷ ಚೇತನರ ಔಪಚಾರಿಕ ಹಾಗೂ ಅನೌಪಚಾರಿಕ (Formal & Nonformal) ಶಿಕ್ಷಣಕ್ಕಾಗಿ ಗರಿಷ್ಠ ರೂ.50,000/- ಗಳ ಆರ್ಥಿಕ ಸಹಾಯ
10	ಪಿ-1938	ದೈಹಿಕ ವ್ಯಾಯಮ (Physiotheropy) ಮತ್ತು ಮಾತಿನ ವ್ಯಾಯಮಕ್ಕೆ (Speechtheropy) ಗಾಗಿ ಸಹಾಯ ಧನ

2018-19ನೇ ಸಾಲಿನ ಕ್ರಿಯಾಯೋಜನೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿರುವ ಶೇ.24.10ರ ಅನುದಾನದಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿ ಕಾಯ್ಕಿರಿಸಿರುವ ಅನುದಾನವನ್ನು ಈ ಹಿಂದಿನ ಸಾಲುಗಳಂತೆ 2018-19ನೇ ಸಾಲಿನಲ್ಲಿಯೂ ಸಹಾ ಆಯಾ ವಾರ್ಡ್‌ಗಳಲ್ಲಿ ವಾಸವಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಪಾಲಿಕೆಯ ಎಲ್ಲಾ ಎಂಟು ವಲಯಗಳ 198 ವಾರ್ಡ್‌ಗಳಿಗೆ ಹಂಚಿಕೆ ಮಾಡಲು ಅನುಮೋದನೆ ಮಾಡಲಾಗಿದೆ.

ಅಧ್ಯಕ್ಷರು
ಸಾಮಾಜಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿ

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2011ರ SECC ಜನಗಣತಿಯ ವರದಿಯನ್ನು 2015 ನೇ ಸಾಲಿನಲ್ಲಿ ಲೋಕಾರ್ಪಣೆ ಮಾಡಲಾಗಿದ್ದು, ಸದರಿ ವರದಿಯನ್ವಯ ಪಾಲಿಕೆಯ 2018-19ನೇ ಸಾಲಿನ ಶೇ.24.10ರ ಅನುಧಾನದಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಅನುಗುಣವಾಗಿ ಕಲ್ಯಾಣ ಕಾರ್ಯಕ್ರಮಗಳು, ವಸತಿ(ಒಂಟಿ ಮನೆ ನಿರ್ಮಾಣ) ಹಾಗೂ ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ಚಾಲ್ತಿ ಅನುದಾನವನ್ನು ವಲಯವಾರು ಹಂಚಿಕೆ ಮಾಡಿರುವ ವಿವರವನ್ನು ಅನುಬಂಧ-02 ರಲ್ಲಿ ಹಾಗೂ ಸದರಿ ಅನುದಾನವನ್ನು ಎಲ್ಲಾ 198 ವಾರ್ಡ್‌ಗಳಿಗೆ ವಾರ್ಡ್‌ವಾರು ಹಂಚಿಕೆ ಮಾಡಿರುವ ವಿವರವನ್ನು ಅನುಬಂಧ-03 ರಲ್ಲಿ ಲಗತ್ತಿಸಲಾಗಿದೆ.

2018-19ನೇ ಸಾಲಿನ ಆಯವ್ಯಯದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳು, ಆರ್ಥಿಕವಾಗಿ ಹಿಂದುಳಿದ ವರ್ಗಗದವರ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳು, ಸಾಮಾನ್ಯ ವರ್ಗದ ಅಡಿಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು, ಮಹಿಳಾ ವರ್ಗದವರ ಹಾಗೂ ಟ್ರಾನ್ಸ್‌ಜೆಂಡರ್‌ಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಚಾಲ್ತಿ ಅನುದಾನವನ್ನು ಪಿ-ಕೋಡ್ ವಾರು ಎಲ್ಲಾ 198 ವಾರ್ಡ್‌ಗಳಿಗೆ ವಲಯವಾರು ಸಮಾನಾಂತರವಾಗಿ ಹಂಚಿಕೆ ಮಾಡಲಾಗಿದೆ.(ವಿವರವನ್ನು ಅನುಬಂಧ-04ರಲ್ಲಿ ಲಗತ್ತಿಸಿದೆ).

ರಾತ್ರಿ ತಂಗುದಾಣಗಳ ನಿರ್ಮಾಣ ಮತ್ತು ನಿರ್ವಹಣೆ ಕಾರ್ಯಕ್ರಮ:- ಲೆಕ್ಕ ಶೀರ್ಷಿಕೆ-2583 ರ ಅಡಿಯಲ್ಲಿ ರೂ.250.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಎಲ್ಲಾ 8 ವಲಯಗಳಿಗೆ ಸಮನಾಂತರವಾಗಿ ಹಂಚಿಕೆ ಮಾಡಲಾಗಿದೆ.(ವಿವರವನ್ನು ಅನುಬಂಧ-04ರಲ್ಲಿ ಲಗತ್ತಿಸಿದೆ)

ಬೀದಿ ಬದಿ ವ್ಯಾಪಾರಕ್ಕೆ ಸ್ಥಳದ ಅಭಿವೃದ್ಧಿ ಕಾರ್ಯಕ್ರಮ:- ಈ ಕಾರ್ಯಕ್ರಮವನ್ನು ಹೊಸದಾಗಿ ಸೇರ್ಪಡೆಗೊಳಿಸಿದ್ದು, ಲೆಕ್ಕ ಶೀರ್ಷಿಕೆ-3432 ರ ಅಡಿಯಲ್ಲಿ ರೂ.200.00 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಕಾರ್ಯಕ್ರಮವನ್ನು ನಲ್ಮ್ ಯೋಜನೆಯ ಮಾರ್ಗಸೂಚಿ ಮತ್ತು ಸುತ್ತೋಲೆಗಳಂತೆ ಕ್ರಮ ವಹಿಸುವುದು.

ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯುಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತ: ಈ ಮೇಲ್ಕಂಡ ಯೋಜನೆ ಪಿ-ಕೋಡ್-3149 ಅಡಿಯಲ್ಲಿ ರೂ.1000-00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿರುವುದರಿಂದ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ರವರ ಸಹಕಾರದೊಂದಿಗೆ ವಿಶೇಷ ಆಯುಕ್ತರು (ಯೋಜನೆ)ರವರು ಯೋಜನೆಯನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸುವುದು.

2018-19 ನೇ ಸಾಲಿನ ಆಯವ್ಯಯದಲ್ಲಿನ ಲೆಕ್ಕ ಶೀರ್ಷಿಕೆ ಪಿ-3149, ಪಿ-2021, ಪಿ-1878, ಪಿ-3431, ಪಿ-3553, ಪಿ-3554, ಪಿ-3555, ಪಿ-3556, ಪಿ-3557, ಪಿ-3496, ಪಿ-3497, ಪಿ-3511, ಪಿ-2652, ಪಿ-3409, ಪಿ-2340, ಪಿ-3444, ಪಿ-3157, ಪಿ-3542, ಪಿ-3160, ಪಿ-3410, ಪಿ-3286, ಪಿ-3288 ಗಳ ಅಡಿಯಲ್ಲಿ ನಿಗಧಿಪಡಿಸಿರುವ ಚಾಲ್ತಿ ಅನುದಾನಕ್ಕೆ ಸಂಬಂಧಿಸಿದಂತೆ ಪ್ರಧಾನ ಅಭಿಯಂತರರು, ಕಾಮಗಾರಿ ವಿಭಾಗದಿಂದ ವಾರ್ಡ್‌ವಾರು ಪ್ರಸ್ತಾವನೆಗಳನ್ನು ಒಳಗೊಂಡ ವಲಯವಾರು ಕಾಮಗಾರಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ, ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು, ವಿಶೇಷ ಆಯುಕ್ತರು(ಯೋಜನೆ)ರವರ ಮುಖಾಂತರ ಸಾ.ನ್ಯಾ.ಸ್ಥಾ.ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳುವುದು

ಈ ಮೇಲ್ಕಂಡಂತೆ 2018-19ನೇ ಸಾಲಿನ ಆಯವ್ಯಯದ ಅಂದಾಜಿನಲ್ಲಿ ಚಾಲ್ತಿ ಕಲ್ಯಾಣ ಕಾರ್ಯಕ್ರಮಗಳ ವಿವಿಧ ಲೆಕ್ಕಶೀರ್ಷಿಕೆಯಡಿ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಅಪರ/ಜಂಟಿ ಆಯುಕ್ತರುಗಳು ವಲಯ ಮಟ್ಟದಲ್ಲಿ ಕಾರ್ಯಕ್ರಮಗಳಿಗೆ ವಾರ್ಡ್‌ವಾರು ಆರ್ಥಿಕ ಮತ್ತು ಭೌತಿಕ ಗುರಿಯನ್ನು ನಿಗಧಿಪಡಿಸಿಕೊಂಡು ಕ್ರಿಯಾಯೋಜನೆಯನ್ನು ಸಿದ್ಧಪಡಿಸಿಕೊಂಡು ಮಾನ್ಯ ಆಯುಕ್ತರವರ ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

ವಿವಿಧ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳನ್ನು 2018-19ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು ಸರ್ಕಾರದ ನಗರಾಢಳಿತ ಇಲಾಖೆ ರವರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರಿಗೆ ಸಂಬಂಧಿಸಿದ ಸುತ್ತೋಲೆ ಸಂಖ್ಯೆ:ನಅಇ/37/ಪಿಎನ್‌ಜಿ/2015 ದಿನಾಂಕ:30/07/2015, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರಿಗೆ ಸಂಬಂಧಿಸಿದ ಸುತ್ತೋಲೆ ಸಂಖ್ಯೆ:ನಅಇ/43/ಪಿಎನ್‌ಜಿ/2015 ದಿನಾಂಕ:29/03/2016, ವಿಶೇಷ ಚೇತನ ವರ್ಗದವರಿಗೆ ಸಂಬಂಧಿಸಿದ ಸುತ್ತೋಲೆ ಸಂಖ್ಯೆ:ನಅಇ/39/ಪಿಎನ್‌ಜಿ/2015 ದಿನಾಂಕ: 09/10/2015

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗಳಲ್ಲಿ ಸೂಚಿಸಿರುವ ಮಾರ್ಗಸೂಚಿಗಳಂತೆ ಅನುಷ್ಠನಗೊಳಿಸಲು ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರು ಕ್ರಮ ಕೈಗೊಳ್ಳುವುದು.

ಕಲ್ಯಾಣ ಕಾರ್ಯಕ್ರಮಗಳನ್ನು ನಿಗಧಿತ ಅವಧಿಯಲ್ಲಿ ಅನುಷ್ಠಾನಗೊಳಿಸಲು ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುಗಳನ್ನು ಅನುಷ್ಠಾನಾಧಿಕಾರಿಗಳಾಗಿ ಹಾಗೂ ಉಪ ಆಯುಕ್ತರುಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ.

ಕಾಮಗಾರಿ ಕಾರ್ಯಕ್ರಮಗಳ ಅಡಿಯಲ್ಲಿ ಅನುದಾನದಡಿಯಲ್ಲಿನ ಮನೆ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುಗಳನ್ನು ಅನುಷ್ಠಾನಾಧಿಕಾರಿಗಳಾಗಿ ಹಾಗೂ ಎಲ್ಲಾ ವಲಯಗಳ ಮುಖ್ಯ ಅಭಿಯಂತರರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ.

2018-19ನೇ ಸಾಲಿನ ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಅನುಷ್ಠಾನಾಧಿಕಾರಿಗಳು ಸಾರ್ವಜನಿಕ ಪತ್ರಿಕಾ ಪ್ರಕಟಣೆ ಮುಖಾಂತರ ಅರ್ಜಿ ಆಹ್ವಾನಿಸಿ, ನಿಯಮಾನುಸಾರ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳಿಗೆ ವಿತರಿಸುವ ಸಲಕರಣೆ/ಸವಲತ್ತುಗಳಿಗೆ ವಲಯ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ನಿಯಮಾನುಸಾರ ಅಧಿಕಾರ ಪ್ರತ್ಯಾಯೋಜನೆಯಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು ಕ್ರಮ ಕೈಗೊಳ್ಳುವುದು.

ಕಲ್ಯಾಣ ಕಾರ್ಯಕ್ರಮಗಳನ್ನು ಶೀಘ್ರ ಅನುಷ್ಠಾನಗೊಳಿಸುವ ಉದ್ದೇಶದಿಂದ ಟೆಂಡರ್ ರಹಿತ ಕಲ್ಯಾಣ ಕಾರ್ಯಕ್ರಮಗಳನ್ನು ಮಾರ್ಗಸೂಚಿಯನ್ವಯ ನಿಯಮಾನುಸಾರ ಅಧಿಕಾರ ಪ್ರತ್ಯಾಯೋಜನೆಯನ್ವಯ ಅಪರ/ಜಂಟಿ ಆಯುಕ್ತರು ವಲಯ ಮಟ್ಟದಲ್ಲಿ ಕೈಗೊಳ್ಳುವುದು.

ಸರ್ಕಾರದ ನಗರಾಡಳಿತ ಇಲಾಖೆಯಲ್ಲಿ ಲಭ್ಯವಿಲ್ಲದೇ ಪಾಲಿಕೆಯ ವ್ಯಾಪ್ತಿಯಲ್ಲಿ ಹೆಚ್ಚಿನ ಬೇಡಿಕೆ ಇರುವ ಕೆಲವು ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳನ್ನು ಅನುಷ್ಠನಗೊಳಿಸಲು ಹಾಗೂ ಸದರಿ ಯೋಜನೆಗಳಿಗೆ ಈಗಾಗಲೇ ಹಿಂದಿನ ಸಾಲುಗಳಲ್ಲಿ ಪಾಲಿಕೆಯಿಂದ ಹೊರಡಿಸಿರುವ ಮಾರ್ಗಸೂಚಿಗಳಂತೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

ಪಾಲಿಕೆಯ ನೈರ್ಮಲ್ಯ ವಿಭಾಗದಲ್ಲಿ ಖಾಯಂ ಹಾಗೂ ಹೊರಗುತ್ತಿಗೆ ಮೇರೆಗೆ ಕಾರ್ಯನಿರ್ವಹಿಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಪೌರಕಾರ್ಮಿಕರು, ಸಫಾಯಿ ಕರ್ಮಚಾರಿಗಳು/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಗಳಿಗೆ ಕಲ್ಯಾಣ ಕಾರ್ಯಕ್ರಮಗಳಲ್ಲಿ ಆದ್ಯತೆ ನೀಡುವುದು.

ವಲಯ ಮಟ್ಟದ ಕ್ರಿಯಾಯೋಜನೆಯ ಯಾವುದೇ ಒಂದು ಲೆಕ್ಕ ಶೀರ್ಷಿಕೆಗಳಡಿ ನಿಗಧಿಪಡಿಸಿರುವ ಕಾರ್ಯಕ್ರಮದ ಅನುಧಾನವು ಬಳಕೆಯಾಗದೇ ಇದ್ದಲ್ಲಿ, ಸೂಕ್ತ ಕಾರಣದೊಂದಿಗೆ ಅದೇ ಲೆಕ್ಕ ಶೀರ್ಷಿಕೆಯ ಇತರ ಯಾವುದೇ ಕಾರ್ಯಕ್ರಮಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಮಾನ್ಯ ವಿಶೇಷ/ಅಪರ ಆಯುಕ್ತರು (ಕಲ್ಯಾಣ)ರವರ ಅನುಮೋದನೆಯೊಂದಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅಪರ/ಜಂಟಿ ಆಯುಕ್ತರುಗಳು ಕ್ರಮ ಕೈಗೊಳ್ಳುವುದು.

ವಲಯ ಮಟ್ಟದ ಕ್ರಿಯಾಯೋಜನೆಯ ಯಾವುದೇ ಒಂದು ಲೆಕ್ಕ ಶೀರ್ಷಿಕೆಗಳಡಿ ನಿಗಧಿಪಡಿಸಿರುವ ಅನುಧಾನವು ಬಳಕೆಯಾಗದೇ ಇರುವ ಅನುದಾನವನ್ನು ಇತರ ಲೆಕ್ಕ ಶೀರ್ಷಿಕೆಯಡಿ ಹೆಚ್ಚು ಬೇಡಿಕೆ ಇರುವ ಕಾರ್ಯಕ್ರಮಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಮಾನ್ಯ ಆಯುಕ್ತರ ಅನುಮೋದನೆಯೊಂದಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ಅನುಮೋದನೆಯೊಂದಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಲಯ ಅಪರ/ಜಂಟಿ ಆಯುಕ್ತರು ಬಗ್ಗೆ ಅನುಮೋದನೆ ಕೋರಿದೆ.

ಪ್ರತಿ ತಿಂಗಳು ವಲಯವಾರು ಪ್ರಗತಿಯ ವರದಿಯನ್ನು ನಿಗಧಿತ ನಮೂನೆಗಳಲ್ಲಿ ವಾರ್ಡ್ ಮತ್ತು ವಲಯವಾರು ಎಲ್ಲಾ ಕಲ್ಯಾಣ ಕಾರ್ಯಕ್ರಮಗಳ ಮತ್ತು ಕಾಮಗಾರಿಗಳ ಒಟ್ಟಾರೆ ಪ್ರಗತಿಯ ವರದಿಯನ್ನು ಕ್ರೋಢೀಕರಿಸಿ ತಪ್ಪದೇ ಕೇಂದ್ರ ಕಛೇರಿಗೆ ಸಲ್ಲಿಸುವುದು ಹಾಗೂ ಮೇಲಧಿಕಾರಿಗಳು ಕರೆಯುವ ಸಭೆಗೆ ಅಗತ್ಯ ಮಾಹಿತಿ/ವಿವರದೊಂದಿಗೆ ಹಾಜರಾಗಲು ಅಪರ/ಜಂಟಿ ಆಯುಕ್ತರು, ಉಪ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಸಹಾಯಕ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದೆ.

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

2018-19ನೇ ಸಾಲಿನ ಕ್ರಿಯಾಯೋಜನೆ ರೂಪಿಸುವ ಸಂಬಂಧ ಮೇಲೆ ವಿವರಿಸಿರುವ , ಎಲ್ಲಾ ಅಂಶಗಳನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅವಗಾಹನೆಗೆ ತರುತ್ತಾ:-

2018-19ನೇ ಸಾಲಿನ ಶೇ.24.10% ರ ಅನುದಾನದಡಿಯ (ಅ)ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಕಲ್ಯಾಣ ಕಾರ್ಯಕ್ರಮಗಳು,ಕಾಮಗಾರಿಗಳು, ವಸತಿ(ಜಂಟಿ ಮನೆ) ನಿರ್ಮಾಣ, (ಆ)ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ಕಲ್ಯಾಣ ಕಾರ್ಯಕ್ರಮಗಳು/ವಸತಿ ನಿರ್ಮಾಣ/ ಕಾಮಗಾರಿಗಳು (ಇ)ಆರ್ಥಿಕವಾಗಿ ಹಿಂದುಳಿದ ವರ್ಗದ ಕಲ್ಯಾಣ ಕಾರ್ಯಕ್ರಮಗಳು/ವಸತಿ ನಿರ್ಮಾಣ/ಕಾಮಗಾರಿಗಳು (ಈ)ಸಾಮಾನ್ಯ ವರ್ಗದ ಅಡಿಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು, ಮಹಿಳಾ ವರ್ಗದವರು ಹಾಗೂ ಟ್ರಾನ್ಸ್‌ಜೆಂಡರ್‌ಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಅನುಷ್ಠಾನಗೊಳಿಸಬೇಕಾದ ಕಲ್ಯಾಣ ಕಾರ್ಯಕ್ರಮಗಳ ಹಾಗೂ ಕಾಮಗಾರಿಗಳ ಅನುದಾನದ ಹಂಚಿಕೆ ಹಾಗೂ ಕ್ರಿಯಾಯೋಜನೆಯನ್ನು ಅನುಮೋದಿಸಲು ಕೋರಿ ಟಿಪ್ಪಣಿಯನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

<u>ತೀರ್ಮಾನ:</u>

1. ಆಯುಕ್ತರವರ ದಿನಾಂಕ 21-08-2018ರ ಟಿಪ್ಪಣಿಯನ್ನು ಸುದೀರ್ಘವಾಗಿ ಪರಿಶೀಲಿಸಿ ಚರ್ಚಿಸಿದ ನಂತರ ಟಿಪ್ಪಣಿಯಲ್ಲಿನ ಪ್ರಸ್ತಾವನೆಗಳನ್ನು ಭಾಗಶ: ಒಪ್ಪುತ್ತ, ಈ ಕೆಳಕಂಡ ಮಾರ್ಪಾಡುಗಳೊಂದಿಗೆ 2018-19ನೇ ಸಾಲಿನ ಆಯವ್ಯಯದ ಅನುದಾನದ ಹಂಚಿಕೆ ಮತ್ತು ಕ್ರಿಯಾಯೋಜನೆಯನ್ನು ಅನುಮೋದಿಸಲು ಸಮಿತಿಯು ಸರ್ವಾನುಮತದಿಂದ ತೀಮಾನಿಸಿದೆ.

2. 2017-18ನೇ ಸಾಲಿನ ಅನುಧಾನದ ಹಂಚಿಕೆ ಮತ್ತು ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳ ಕ್ರಿಯಾಯೋಜನೆಗೆ ದಿನಾಂಕ:10-11-2017ರಂದು ಮಾನ್ಯ ಆಯುಕ್ತರವರ ಅನುಮೋದನೆಯಾಗಿದ್ದು, ಈ ಆಧಾರದ ಮೇಲೆ 2017-18ನೇ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿರುವ ಅನುದಾನಕ್ಕೆ ಅನುಗುಣವಾಗಿ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸಿದ್ಧತೆ ಮಾಡಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದ್ದು 2017-18ನೇ ಸಾಲಿನ ಆರ್ಥಿಕ ವರ್ಷ ಈಗಾಗಲೇ ಮುಕ್ತಾಯಗೊಂಡಿದ್ದು ಕಾರ್ಯಕ್ರಮಗಳು ಅನುಷ್ಠಾನದ ಹಂತದಲ್ಲಿರುವುದರಿಂದ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಸರಬರಾಜು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ನಿಯಮಾನುಸಾರ ಮಾರ್ಗಸೂಚಿಯನ್ವಯ ಟೆಂಡರ್ ರಹಿತ ಕಾರ್ಯಕ್ರಮಗಳಾದ ಶಾಲಾ/ಕಾಲೇಜು ಶುಲ್ಕಗಳ ಮರುಪಾವತಿ ನೀಡುವ ಕಾರ್ಯಕ್ರಮಗಳಿಗೂ ಸಹಾ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಸೌಲಭ್ಯಗಳನ್ನು ವಿತರಿಸುವ ಹಂತದಲ್ಲಿರುವುದರಿಂದ ಸದರಿ ಎಲ್ಲಾ ಕಾರ್ಯಕ್ರಮಗಳನ್ನು 2017-18ನೇ ಸಾಲಿನ ಕ್ರಿಯಾಯೋಜನೆಯಲ್ಲಿನ ಅವಕಾಶಗಳು, ಕಾರ್ಯಕ್ರಮ /ಅನುದಾನದ ಲಭ್ಯತೆಯ ಮೇರೆಗೆ 2018-19ನೇ ಸಾಲಿಗೆ ಮುಂದುವರಿಸಿಕೊಂಡು, ಸದರಿ ಕಾರ್ಯಕ್ರಮಗಳಿಗೆ 2017-18ನೇ ಸಾಲಿನ ಆಯವ್ಯಯದ ಅನುದಾನದಿಂದ ಮುಂದುವರಿಸಲಾದ ಅರ್ಹ ಉಳಿಕೆ ಅನುದಾನದಲ್ಲಿ ವೆಚ್ಚ ಭರಿಸಲು ನಿರ್ಣಯಿಸಿದೆ.

3. ಪ್ರಸ್ತಾಪಿತ ಟಿಪ್ಪಣಿಯಲ್ಲಿ ಈ ಹಿಂದಿನ ಸಾಲುಗಳಲ್ಲಿ ಬೇಡಿಕೆ ಇಲ್ಲದ ಕಾರ್ಯಕ್ರಮಗಳನ್ನು ಕೈಬಿಡಲು ಹಾಗೂ ಹೆಚ್ಚು ಬೇಡಿಕೆ ಇರುವ ಕೆಲವು ಕಾರ್ಯಕ್ರಮಗಳನ್ನು ಸೇರ್ಪಡೆಗೊಳಿಸಲು ಕೋರಿರುವ ಮೇರೆಗೆ ಭಾಗಶ: ಮಾರ್ಪಡಿಸಿ ಈ ಕೆಳಕಂಡಂತೆ ಬೇಡಿಕೆ ಇಲ್ಲದ ಕಾರ್ಯಕ್ರಮಗಳನ್ನು ಕೈಬಿಡಲು ನಿರ್ಣಯಿಸಿದೆ ಹಾಗೂ ಹೆಚ್ಚು ಬೇಡಿಕೆ ಇರುವ ಈ ಕೆಳಕಂಡ ಕಾರ್ಯಕ್ರಮಗಳನ್ನು ಎಲ್ಲಾ ವರ್ಗಗಳ ಅಡಿಯಲ್ಲಿ ಸೇರ್ಪಡೆಗೊಳಿಸಲು ನಿರ್ಣಯಿಸಿದೆ.

ಕ್ರ.ಸಂಖ್ಯೆ	ಕೈಬಿಡಲಾದ ಕಾರ್ಯ ಕ್ರಮಗಳು
1.	ಎಲ್.ಎಲ್.ಬಿ ಪದವಿ ಹೊಂದಿದ್ದು, ವೃತ್ತಿನಿರತ ವಕೀಲರುಗಳಿಗೆ ಸಹಾಯಧನ ನೀಡುವುದು, ವೃತ್ತಿ ಪ್ರಾರಂಭಿಸಲು ನೋಂದಣಿ ಮಾಡಿದ ವರ್ಷದಲ್ಲಿ ಅರ್ಜಿ ಸಲ್ಲಿಸಿದರೆ ಆನ್‌ಲೈನ್ ಕಾನೂನು ಪುಸ್ತಕ ಭಂಡಾರಕ್ಕೆ 5 ವರ್ಷಗಳ ಅವಧಿಗೆ ನೀಡಬೇಕಾದ ಚಂದಾ ಶುಲ್ಕವನ್ನು ನೇರವಾಗಿ ಪಾವತಿಸುವುದು.
2.	ವೈಯಕ್ತಿಕ ಅಭ್ಯಾಸ ಪ್ರಾರಂಭಿಸಿರುವ ವೈದ್ಯರಿಗೆ ಪದವಿಯಲ್ಲಿ ತೇರ್ಗಡೆಯಾದ ಅಲೋಪತಿ ವೈದ್ಯ/ ಆಯುರ್ವೇದ/ಹೋಮಿಯೋಪತಿ/ಯುನಾನಿ/ಸಿದ್ಧ ಮತ್ತು ನಿಸರ್ಗ ಚಿಕಿತ್ಸೆ/ಯೋಗ ವೃತ್ತಿ ಪ್ರಾರಂಭಿಸಲು ಅವರವರ ಸಂಬಂಧಪಟ್ಟ ಕೌನ್ಸಿಲ್/ಅಸೋಸಿಯೇಷನ್‌ಗಳಲ್ಲಿ ನೋಂದಾಯಿಸಿಕೊಂಡ ಒಂದು ವರ್ಷದ ಒಳಗಾಗಿ ವೈದ್ಯಕೀಯ ಸಲಕರಣೆ ಪಡೆದುಕೊಳ್ಳಲು ಸಹಾಯಧನ ನೀಡುವುದು.

ಆಯುಕ್ತರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬ್ಬಿಹೆಸ್ ಬೆಂಗಳೂರು ಮಹಾನಗರ ಪಾಲಿಕೆ.

3.	ಶಸ್ತ್ರ ಚಿಕಿತ್ಸೆ/ ವೈದ್ಯಕೀಯ ಸೇವೆಗಳು, ದೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಬೀರ ಸ್ವರೂಪದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯ.
4	ಪಿ.ಎಚ್.ಡಿ/ಎಂ.ಫಿಲ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಂಶೋಧನಾ ಪ್ರಬಂಧಗಳನ್ನು ಮಂಡಿಸಲು ಪ್ರತಿಷ್ಠಿತ ಸಂಸ್ಥೆಗಳಿಂದ ಆಯೋಜಿಸಲ್ಪಡುವ ಸಮಾವೇಶ/ಕಾರ್ಯಗಾರಗಳಲ್ಲಿ ಭಾಗವಹಿಸಲು ವಾಸ್ತವಿಕ ವೆಚ್ಚವನ್ನು ಭರಿಸುವುದು.
5	ಅಭಿವೃದ್ಧಿ ಉಪಯುಕ್ತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು(ಸಲ್ಕ್ ಯೋಜನೆಯ ಮಾರ್ಗಸೂಚಿನ್ವಯ ಸಕ್ಷಮ ಪಾಧಿಕಾರದ ಅನುಮೋದನೆಯೊಂದಿಗೆ ತರಬೇತಿಯನ್ನು ನೀಡಲು ಕ್ರಮ ವಹಿಸುವುದು.
6	ಒಳಚರಂಡಿ ಸ್ವಚ್ಚಗೊಳಿಸುವಾಗ ಅಪಘಾತವಾದ ವ್ಯಕ್ತಿಗಳು ಮರಣ ಹೊಂದಿದ್ದಲ್ಲಿ ಸರ್ಕಾರ ನಿಗದಿಪಡಿಸಿರುವ ಪರಿಹಾರ ಮೊತ್ತವನ್ನು ಭರಿಸುವುದು.

ಕ್ರ.ಸಂ	ಸೇರ್ಪಡೆ ಮಾಡಿರುವ ಕಾರ್ಯಕ್ರಮಗಳು
1	ಬ್ಯೂಟಿ ಪಾರ್ಲರ್ ತರಬೇತಿ ಪಡೆಯಲು/ವೃತ್ತಿ ಪ್ರಾರಂಭಿಸಲು ಧನಸಹಾಯ
2	ಫ್ಯಾಷನ್ ಡಿಸೈನಿಂಗ್ ತರಬೇತಿ ಪಡೆಯಲು/ವೃತ್ತಿ ಪ್ರಾರಂಭಿಸಲು ಗರಿಷ್ಠ ರೂ 50,000/-ಗಳ ಧನಸಹಾಯ
3	ಸಾರಥಿ ಯೋಜನೆಯಡಿಯಲ್ಲಿ ಮಹಿಳಾ ಪ್ರಯಾಣಿಕರು ಮತ್ತು ಅವರ ಕುಟುಂಬದವರು ಮಾತ್ರ ಪ್ರಯಾಣಿಸುವ ಪಿಂಕ್ ಆಟೋರಿಕ್ಷಾಗಳನ್ನು ಕೊಳ್ಳಲು ಗರಿಷ್ಠ 75,000/- ಗಳ ಸಹಾಯ ಧನ. ಅರ್ಹ ಅಂಗವಿಕಲರಿಗೆ ಆದ್ಯತೆ ನೀಡುವುದು.
	<u>ವಿಶೇಷ ಚೇತನ ವರ್ಗದವರಿಗೆ ಸೇರ್ಪಡೆಗೊಳಿಸುವ ಕಾರ್ಯಕ್ರಮಗಳು</u>
4	ಸರ್ಕಾರಿ ಆಥವಾ ಖಾಸಗಿ ಶಾಲಾ/ಕಾಲೇಜುಗಳಲ್ಲಿ 1ನೇ ತರಗತಿಯಿಂದ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ವಿಶೇಷಚೇತನ ವಿದ್ಯಾರ್ಥಿಗಳಿಗೆ ಹಾಗೂ ವಿಶೇಷ ಚೇತನರ ಕುಟುಂಬದ ಒಂದು ಮಗ ಅಥವಾ ಮಗಳಿಗೆ ಶುಲ್ಕ ಮರುಪಾವತಿ (ಪಾವತಿಸಿರುವ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮೊತ್ತ ಗರಿಷ್ಠ ರೂ.50,000/-ಮೀರದಂತೆ)
5	ಪಾಲಿಕೆ, ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸುವುದು.
6	ವಿಶೇಷಚೇತನರಿಗೆ Automated Wheel Chair ವಿತರಿಸುವುದು(ಪ್ರತಿ ವಾರ್ಡ್‌ಗೆ 6 ರಂತೆ)
7	Solar Powered Petty Shop ಕೊಳ್ಳಲು ರೂ.1,50,000/- ಗಳ ಸಹಾಯಧನ (ಪ್ರತಿ ವಾರ್ಡ್‌ಗೆ 3 ರಂತೆ)
8	ಅಂಗವಿಕಲರ ಹಕ್ಕುಗಳ ಕಾಯ್ದೆ 2016ರ ಅನ್ವಯ ಗುರುತಿಸಿರುವ 21 ಅಂಗವೈಕಲ್ಯಗಳನ್ನು ಸರಿಪಡಿಸುವ ಸಲುವಾಗಿ ನಡೆಸುವ ಶಸ್ತ್ರ ಚಿಕಿತ್ಸೆಗೆ ಗರಿಷ್ಠ ರೂ.50,000/-ಗಳ ವರೆಗೆ ಧನಸಹಾಯ
9	ಬುದ್ಧಿಮಾಂದ್ಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ
10	2018-19ನೇ ಸಾಲಿನಲ್ಲಿ ಒಟ್ಟಾರೆ ಸದರಿ ಪಿ-ಕೋಡ್‌ಗೆ ನಿಗದಿಪಡಿಸಿರುವ ಅನುದಾನದಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರತೀ ವಾರ್ಡ್‌ಗೆ ರೂ.5.00ಲಕ್ಷಗಳು ಮೀರದಂತೆ ಪಾಲಿಕೆಯ ಕಟ್ಟಡಗಳಲ್ಲಿ ರ‍್ಯಾಂಪ್ ನಿರ್ಮಿಸುವುದು, ಪಾಲಿಕೆಯ ಪಾರ್ಕ್‌ಗಳಲ್ಲಿ ವಿಕಲಚೇತನರ ಉಪಯೋಗಕ್ಕಾಗಿ ಪ್ರತ್ಯೇಕ ಶೌಚಾಲಯ ನಿರ್ಮಿಸುವುದು ಹಾಗೂ ಇತರ ವಿಕಲಚೇತನ ಸ್ನೇಹಿ ಕಾಮಗಾರಿಗಳನ್ನು CPWD ಮಾರ್ಗಸೂಚಿಯಂತೆ ಕಾಮಗಾರಿಗಳನ್ನು ಕೇಂದ್ರ ಕಛೇರಿಯ ಎಂಪಿಇಡಿ ವಿಭಾಗದಿಂದ ಕೈಗೊಳಗೊಳ್ಳುವುದು.
11	ಶೇ.75 ಕ್ಕಿಂತ ಹೆಚ್ಚು ಅಂಗವೈಕಲ್ಯಹೊಂದಿರುವ ವಿಶೇಷ ಚೇತನರಿಗೆ ನೆರವಾಗಿರುವ ಕುಟುಂಬದ ಒಬ್ಬ ಸದಸ್ಯರಿಗೆ ಸ್ವಯಂ ಉದ್ಯೋಗಕ್ಕಾಗಿ ರೂ. 80,000 ದಿಂದ ರೂ. 1,00000/- ಗಳ ವರೆಗೆ ಆರ್ಥಿಕ ಸಹಾಯ.
12	ಶೇ.45 ಕ್ಕಿಂತ ಹೆಚ್ಚು ವಿಕಲತೆ ಹೊಂದಿರುವ ಪೋಷಕರ ಮಕ್ಕಳಿಗೆ ಹಾಗೂ ವಿಶೇಷ ಚೇತನರ ಔಪಚಾರಿಕ ಹಾಗೂ ಅನೌಪಚಾರಿಕ (Formal & Nonformal) ಶಿಕ್ಷಣಕ್ಕಾಗಿ ಗರಿಷ್ಠ ರೂ.50,000/- ಗಳ ಆರ್ಥಿಕ ಸಹಾಯ.

ಸಹಿ/-
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

13	ದೈಹಿಕ ವ್ಯಾಯಮ (Physiotheropy) ಮತ್ತು ಮಾತಿನ ವ್ಯಾಯಮಕ್ಕೆ (Speechtheropy) ಗಾಗಿ ಸಹಾಯ ಧನ
14	ಪಾಲಿಕೆ ವ್ಯಾಪ್ತಿಯಲ್ಲಿ ವಿಶೇಷ ಚೇತನರ ಸಮಿಕ್ಷೆ ನಡೆಸುವುದು
15	ಅಂಗವಿಕಲರ ಶುಷ್ರೂಷೆಗೆ ಸಂಬಂಧಿಸಿದ ಸರ್ಟಿಫಿಕೇಟ್ ಕೋರ್ಸ್/ಡಿಪ್ಲೊಮಾ/ಪದವಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಾರ್ಷಿಕ ಗರಿಷ್ಠ ರೂ.1,00,000/- ಗಳ ವರೆಗೆ ಧನಸಹಾಯ
16	ಕಿವುಡು ಅಂಗವೈಕಲ್ಯ ಹೊಂದಿರುವ ವಿಶೇಷ ಚೇತನರಿಗೆ . ಇಯರಿಂಗ್ ಏಡ್‌ಗಳನ್ನು ಸರಬರಾಜು ಮಾಡುವವರ ಸಹಯೋಗದಲ್ಲಿ ವೈದ್ಯಕೀಯ ತಪಾಸಣೆ (ಆಡಿಯೋ ಮೆಟ್ರಿಕ್ ಮತ್ತು ಕ್ಯಾಲಿಬರೈಸೇಶನ್) ಯೊಂದಿಗೆ ಒದಗಿಸುವುದು.

4. 2018-19ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವು ಅನುಮೋದನೆಗೊಂಡಿರುವ ಮೇರೆಗೆ ಶೇ.24.10ರ ಅನುದಾನದಲ್ಲಿ ಪರಿಶಿಷ್ಟ ಜಾತಿ ವರ್ಗದವರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡ ವರ್ಗದವರಿಗೆ ಶೇ.6.95 ರಂತೆ ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರಿಗೆ ಶೇ.7.25 ರಂತೆ, ಆರ್ಥಿಕವಾಗಿ ಹಿಂದುಳಿದ ವರ್ಗಗದವರಿಗೆ ಹಾಗೂ ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಸಾಮಾನ್ಯ ವರ್ಗದವರಿಗೆ, ಹಿರಿಯ ನಾಗರಿಕರಿಗೆ, ನಿಕಲಚೇತನರಿಗೆ, ಮಹಿಳಾ ವರ್ಗದವರಿಗೆ ಮತ್ತು ಟ್ರಾನ್ಸ್‌ಜೆಂಡರ್‌ಗಳಿಗೆ ಕಲ್ಯಾಣ ಹಾಗೂ ಕಾಮಗಾರಿ ಕಾರ್ಯಕ್ರಮಗಳನ್ನು ಮೇಲಿನ ಮಾರ್ಗದರ್ಶಿಗಳಂತೆ ಹಮ್ಮಿಕೊಳ್ಳಲು ನಿರ್ಣಯಿಸಿದೆ.

5. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿರುವ ಶೇ.24.10ರ ಅನುದಾನದಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿ ಕಾಯ್ದಿರಿಸಿರುವ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳ ಅನುದಾನವನ್ನು ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2011ರ SECC ಜನಗಣತಿ ವರದಿಯ ಅನುಸಾರ, ಈ ಹಿಂದಿನ ಸಾಲುಗಳಂತೆ 2018-19ನೇ ಸಾಲಿನಲ್ಲಿಯೂ ಸಹಾ ಅಥವಾ ವಾರ್ಡ್‌ಗಳಲ್ಲಿ ವಾಸವಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಪಾಲಿಕೆಯ ಎಲ್ಲಾ ಎಂಟು ವಲಯಗಳ 198 ವಾರ್ಡ್‌ಗಳಿಗೆ ಹಂಚಿಕೆ ಮಾಡಲು ಟಿಪ್ಪಣಿಯಲ್ಲಿ ಕೋರಿರುವುದನ್ನು ಪರಿಶೀಲಿಸಲಾಗಿ, ಸ್ಥಳೀಯ ಶಾಸಕರುಗಳು ಮತ್ತು ಪಾಲಿಕೆ ಸದಸ್ಯರುಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವರ್ಗದ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ನಿಗಧಿಪಡಿಸಿರುವ ಪಿ-1878:ಮೂಲಭೂತ ಸೌಲಭ್ಯಗಳಿಗೆ ರೂ.11000.00 ಲಕ್ಷಗಳು ಮತ್ತು ಪಿ-2652ರ ಸಮುದಾಯ ಕಾಮಗಾರಿ ಸೌಲಭ್ಯಗಳಿಗೆ ರೂ.5000.00 ಲಕ್ಷಗಳ ಅನುದಾನಗಳನ್ನು ಶೇ.50 ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕೈಗೊಳ್ಳಲು ಸಂಬಂಧಿಸಿದ ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗಿದೆ ಹಾಗೂ ಇತರ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳ ಪಿ-0224, ಪಿ-3313, ಪಿ-2020, ಪಿ-2022 ಮತ್ತು ಪಿ-2023 ಗಳ ಅನುದಾನವನ್ನು ಪಾಲಿಕೆಯ ಎಲ್ಲಾ ಎಂಟು ವಲಯಗಳ 198 ವಾರ್ಡ್‌ಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡಲು ನಿರ್ಣಯಿಸಿದೆ.

6. ಪಿ-3512 ರ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸಂವಿಧಾನ ಪುಸ್ತಕದ ಬೋಧನೆಗಾಗಿ ವಿತರಣೆ (ಕರ್ನಾಟಕ ಎಸ್.ಸಿ/ಎಸ್.ಟಿ ಗ್ರಾಜುಯೇಟ್ಸ್ ಅಸೋಸಿಯೇಷನ್ ರಿ.) ರವರಿಗೆ ನಿಗಧಿಪಡಿಸಿರುವ ರೂ.100.00 ಲಕ್ಷಗಳ ಅನುದಾನವನ್ನು ಸದರಿ ಸಂಸ್ಥೆಯವರ ಕೋರಿಕೆಯ ಮೇರೆಗೆ ಚರ್ಚಿಸಲಾಗಿ ಬಿಬಿಎಂಪಿ ವ್ಯಾಪ್ತಿಗೆ ಬರುವ ಶಾಲಾ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಭಾರತದ ಸಂವಿಧಾನ ಪುಸ್ತಕ ವಿತರಣೆ, ಸಂವಿಧಾನದ ತಜ್ಞರಿಂದ ವಿಚಾರಗೋಷ್ಠಿ ಹಾಗೂ ಬೆಂಗಳೂರು ಸ್ವಚ್ಛತೆಯ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸುವ ಜಾಥಾ ಕಾರ್ಯಕ್ರಮಗಳನ್ನು ಪಾಲಿಕೆಯ ವಿದ್ಯಾ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲು ಮುಂಗಡವಾಗಿ ಶೇ.50 ರಷ್ಟು ಮೊತ್ತವನ್ನು ಹಾಗೂ ಸದರಿ ಸಂಸ್ಥೆಯವರಿಂದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ ನಂತರ ಖರ್ಚು/ವೆಚ್ಚದ ಬಗ್ಗೆ ಸೂಕ್ತ ದಾಖಲಾತಿಗಳನ್ನು ಪಡೆದು ವಿದ್ಯಾ ಇಲಾಖೆಯಿಂದ ಪರಿಶೀಲಿಸಿದ ನಂತರ ನಿಯಮಾನುಸಾರ ಉಳಿದ ಶೇ.50 ಮೊತ್ತವನ್ನು ಬಿಡುಗಡೆ ಮಾಡುವ ಸಂಬಂಧ ಕ್ರಮ ವಹಿಸಲು ನಿರ್ಣಯಿಸಿದೆ.

7. ಪಿ-2023 ರ ಅಡಿಯಲ್ಲಿ ನಿಗಧಿಪಡಿಸಿರುವ ರೂ.1200.00 ಲಕ್ಷಗಳ ಅನುದಾನದಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಕ್ಕೆ ರೂ.100.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಕೇಂದ್ರ ಕಛೇರಿಯಿಂದ ನಿರ್ವಹಿಸಲು ಹಾಗೂ ಸದರಿ ಪಿ-ಕೋಡ್‌ನಲ್ಲಿನ ಉಳಿಕೆ ಅನುದಾನದ ಮೊತ್ತ ರೂ.1100.00 ಲಕ್ಷಗಳನ್ನು

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಎಲ್ಲಾ ಎಂಟು ವಲಯಗಳ 198 ವಾರ್ಡ್‌ಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡಲು ನಿರ್ಣಯಿಸಿದೆ

8. ಪಿ-1878ರ ಮೂಲಭೂತ ಸೌಲಭ್ಯಗಳ ಕಾರ್ಯಕ್ರಮದ ಅಡಿಯಲ್ಲಿ ನಿಗಧಿ ಪಡಿಸಿರುವ ರೂ.11000=00 ಲಕ್ಷಗಳ ಅನುದಾನವನ್ನು ಶೇ.50 ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕೈಗೊಳ್ಳಲು ಈ ಕೆಳಕಂಡ ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗಿದ್ದು, ಪಾಲಿಕೆ ಸದಸ್ಯರು ಸೂಚಿಸುವ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಲು ಸಮಿತಿಯು ತೀರ್ಮಾನಿಸಿದೆ. ಹಂಚಿಕೆ ಮಾಡಿರುವಂತೆ ಮುಖ್ಯ ಆರ್ಥಿಕ ಅಧಿಕಾರಿಗಳು ವಲಯವಾರು ಅನುದಾನ ಹಂಚಿಕೆ ಮಾಡಲು ಕ್ರಮಕ್ಕೈಗೊಳ್ಳುವುದು. ಅದರಂತೆ ಆಯಾ ವಲಯದ ಉಪ ನಿಯಂತ್ರಕರು (ಹಣಕಾಸು)ರವರು ಜಾಬ್‌ಸಂಖ್ಯೆ ನೀಡುವುದು ಹಾಗೂ ಸದರಿ ಕಾಮಗಾರಿಗಳನ್ನು ಮರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನಲೆಯಲ್ಲಿ ಸರ್ಕಾರದ ಅಂಗ ಸಂಸ್ಥೆಯಾದ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ನಿರ್ಣಯಿಸಿದೆ.

ಕ್ರ. ಸಂ	ವಾರ್ಡ್ ಸಂಖ್ಯೆ	ಮೊತ್ತ (ರೂ ಲಕ್ಷಗಳಲ್ಲಿ)	ಕ್ರ. ಸಂ	ವಾರ್ಡ್ ಸಂಖ್ಯೆ	ಮೊತ್ತ (ರೂ ಲಕ್ಷಗಳಲ್ಲಿ)
1	2	50.00	35	104	75.00
2	3	150.00	36	112	75.00
3	5	275.00	37	117	60.00
4	6	150.00	38	121	50.00
5	7	100.00	39	124	100.00
6	8	200.00	40	130	25.00
7	11	400.00	41	131	100.00
8	12	50.00	42	132	150.00
9	14	100.00	43	133	100.00
10	21	100.00	44	134	100.00
11	25	400.00	45	135	150.00
12	28	200.00	46	136	225.00
13	31	200.00	47	138	50.00
14	35	60.00	48	139	125,00
15	40	500.00	49	140	75.00
16	43	100.00	50	141	100.00
17	48	50.00	51	145	100.00
18	54	400.00	52	149	300.00
19	59	130.00	53	150	100.00
20	60	100.00	54	151	100.00
21	62	250.00	55	152	75.00
22	67	140.00	56	166	200.00
23	71	400.00	57	172	75.00
24	72	450.00	58	173	50.00
25	77	200.00	59	175	150.00
26	78	150.00	60	179	50.00
27	82	100.00	61	180	100.00
28	84	200.00	62	184	800.00
29	88	30.00	63	188	200.00
30	90	250.00	64	194	125.00
31	95	80.00	65	196	400.00

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

32	98	50.00		66	198	350.00
33	99	125.00		67	160	25.00
34	101	100.00				

9. ಪಿ-2652ರ ಸಮುದಾಯ ಕಾಮಗಾರಿ ಸೌಲಭ್ಯಗಳು ಕಾರ್ಯಕ್ರಮದ ಅಡಿಯಲ್ಲಿ ನಿಗಧಿ ಪಡಿಸಿರುವ ರೂ.500.00 ಲಕ್ಷಗಳ ಅನುದಾನವನ್ನು ಶೇ.50 ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರು ವಾಸಿರುತ್ತಿರುವ ಪ್ರದೇಶಗಳಲ್ಲಿ ಅಗತ್ಯ ಸಮುದಾಯ ಕಾಮಗಾರಿ ಸೌಲಭ್ಯಗಳನ್ನು ಕೈಗೊಳ್ಳಲು ಈ ಕೆಳಕಂಡ ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗಿದ್ದು, ಪಾಲಿಕೆ ಸದಸ್ಯರು ಸೂಚಿಸುವ ಕಾಮಗಾರಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿಕೊಂಡು ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಲು ಸಮಿತಿಯು ತೀರ್ಮಾನಿಸಿದ. ಹಂಚಿಕೆ ಮಾಡಿರುವಂತೆ ಮುಖ್ಯ ಆರ್ಥಿಕ ಅಧಿಕಾರಿಗಳು ವಲಯವಾರು ಅನುದಾನ ಹಂಚಿಕೆ ಮಾಡಲು ಕ್ರಮಕೈಗೊಳ್ಳುವುದು. ಅದರಂತೆ ಆಯಾ ವಲಯದ ಉಪ ನಿಯಂತ್ರಕರು (ಹಣಕಾಸು) ರವರು ಜಾಬ್‌ಸಂಖ್ಯೆ ನೀಡುವುದು ಹಾಗೂ ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನಲೆಯಲ್ಲಿ ಸರ್ಕಾರದ ಅಂಗ ಸಂಸ್ಥೆಯಾದ ಮೆ॥ಕೆ.ಆರ್.ವಿ.ಡಿ.ಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ನಿರ್ಣಯಿಸಿದೆ.

ಕ್ರ. ಸಂ.	ವಾರ್ಡ್ ಸಂಖ್ಯೆ	ಮೊತ್ತ (ರೂ ಲಕ್ಷಗಳಲ್ಲಿ)	ಕ್ರ. ಸಂ.	ವಾರ್ಡ್ ಸಂಖ್ಯೆ	ಮೊತ್ತ (ರೂ ಲಕ್ಷಗಳಲ್ಲಿ)
1	175	100.00	4	12	50.00
2	194	100.00	5	153	150.00
3	59	100.00			

10. ಪಿ-2021 ವಸತಿ ಸೌಲಭ್ಯಗಳಿಗೆ ಸಹಾಯಧನ ಕಾರ್ಯಕ್ರಮಗಳು ಅಡಿಯಲ್ಲಿ ರೂ.10,000.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರಿಗೆ ಪಕ್ಕಾ ಮನೆ ನಿರ್ಮಾಣಕ್ಕೆ ಪ್ರತಿ ಮನೆಗೆ ರೂ.5.00 ಲಕ್ಷಗಳ ಸಹಾಯಧನವನ್ನು ಮೀಸಲಿರಿಸಿದ್ದು, ಇದರಲ್ಲಿ ರೂ.4.50 ಲಕ್ಷಗಳನ್ನು ಪ್ರತಿ ಪಕ್ಕಾ ಮನೆ ನಿರ್ಮಾಣಕ್ಕೆ ನಿಗಧಿಪಡಿಸಿದೆ. ಉಳಿದ ರೂ 50.00 ಸಾವಿರಗಳನ್ನು ಸದರಿ ಮನೆಗೆ ಸೋಲಾರ್ ವಾಟರ್ ಹೀಟರ್‌ನ್ನು ಅಳವಡಿಸಲು ನಿಗಧಿಪಡಿಸಿದೆ.

ವಸತಿ ಕಾಮಗಾರಿಗಳನ್ನು ಕಾಮಗಾರಿ ಶಾಖೆಯಿಂದ ವಲಯ ಮುಖ್ಯ ಅಭಯಂತರರು, ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ವರ್ಗವಾರು ಪ್ರಸ್ತಾವನೆಗಳನ್ನು ಒಳಗೊಂಡ ವಾರ್ಡ್/ಉಪ ವಿಭಾಗ/ವಿಭಾಗೀಯ/ವಲಯವಾರು ಕಾಮಗಾರಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಮುಚ್ಚಯ ಮಾರ್ಗದಲ್ಲಿ ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡದು ಯೋಜನೆಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿದೆ.

ಸದರಿ ಯೋಜನೆಯಲ್ಲಿ ಪೂರ್ಣಗೊಂಡ ಮನೆಗಳಿಗೆ ನಿಗಧಿತ ಸಮಯದಲ್ಲಿ 4ಜಿ ವಿವಾಯಿತಿ ಹೊಂದಿರುವ ಸಂಸ್ಥೆ/ಟೆಂಡರ್ ನಿಯಮಾವಳಿಗಳ ಅನುಸಾರ ಸೋಲಾರ್ ವಾಟರ್ ಹೀಟರ್‌ನ್ನು ಅಳವಡಿಸುವ ಸಲುವಾಗಿ ಕೇಂದ್ರ ಕಛೇರಿಯ ಕಲ್ಯಾಣ ವಿಭಾಗದಿಂದ ಕ್ರಮ ಕೈಗೊಳ್ಳಲು ತೀರ್ಮಾನಿಸಿದೆ.

11. ಪಿ-3407 ಪೌರಕಾರ್ಮಿಕರಿಗೆ ಮಧ್ಯಾಹ್ನದ ಬಿಸಿ ಊಟ ನೀಡುವ ಕಾರ್ಯಕ್ರಮದ ಅಡಿಯಲ್ಲಿ ರೂ.1500.00 ಲಕ್ಷಗಳನ್ನು ನಿಷಧಪಡಿಸಿದ್ದು, ಸದರಿ ಕಾರ್ಯಕ್ರಮವನ್ನು ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ) ರವರ ವಿಭಾಗದಿಂದ ನಿರ್ವಹಿಸಲು ತೀರ್ಮಾನಿಸಿದೆ.

12. ಪಿ-3408 ರ ಪೌರಕಾರ್ಮಿಕರಿಗೆ ಸುರಕ್ಷಾ ಸಲಕರಣೆಗಳು ಅಡಿಯಲ್ಲಿ ರೂ.1500.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಸದರಿ ಕಾರ್ಯಕ್ರಮವನ್ನು ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘನ ತ್ಯಾಜ್ಯ) ರವರ ಸಹಯೋಗದೊಂದಿಗೆ ವಿಶೇಷ ಆಯುಕ್ತರು (ಕಲ್ಯಾಣ) ರವರ ಮುಖಾಂತರ ನಿರ್ವಹಿಸಲು ತೀರ್ಮಾನಿಸಿದ ಹಾಗೂ ಸದರಿ ಅನುದಾನವನ್ನು ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ) ರವರು ಸಲ್ಲಿಸುವ ಪೌರಕಾರ್ಮಿಕರ ವಿವಿಧ ಸುರಕ್ಷಾ ಸಲಕರಣೆಗಳ ಬೇಡಿಕೆಗೆ ಅನುಗುಣವಾಗಿ ವಲಯವಾರು ಹಂಚಿಕೆ ಮಾಡಲು ನಿರ್ಣಯಿಸಿದೆ.

(ಆಯುಕ್ತರು)
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
(ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)

ಪರಿಸಿರುವ ಸರ

13. ಪಿ-3149 ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತ ರೂ.1000.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಸದರಿ ಕಾರ್ಯಕ್ರಮವನ್ನು ನಿಯಮಾನುಸಾರ ಈ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ಸಿದ್ಧಪಡಿಸಲು ಮತ್ತು ಅನುದಾನ ಹಂಚಿಕೆ ಹಾಗೂ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಕಾಮಗಾರಿ ವಿಭಾಗದವರು ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನಿರ್ಣಯಿಸಿದೆ.

14. ಈ ಕೆಳಕಂಡ ಕಾರ್ಯಕ್ರಮಗಳನ್ನು ಶೇ.24.10 ರ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಕಾಮಗಾರಿ ವಿಭಾಗದವರು ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನಿರ್ಣಯಿಸಿದೆ.

ಪಿ-3431	ವಾರ್ಡ್ 78ರಲ್ಲಿ ಪರಿಶಿಷ್ಟ ಜಾತಿ/ಪಂಗಡ ಮತ್ತು ಪೌರಕಾರ್ಮಿಕರಿಗೆ ಸಮುದಾಯ ಭವನದ ನಿರ್ಮಾಣ	500.00
ಪಿ-3553	ಮಾರಪ್ಪನಪಾಳ್ಯ ವಾರ್ಡ್‌ನಲ್ಲಿ ಅಂಬೇಡ್ಕರ್ ಭವನ ನಿರ್ಮಾಣ	500.00
ಪಿ-3554	ವಾರ್ಡ್ 148ರ ಇಂದಿರಾಗಾಂಧಿ ಸ್ಲಂನಲ್ಲಿ ಸಮುದಾಯ ಭವನ ನಿರ್ಮಾಣ	50.00
ಪಿ-3555	ವಾರ್ಡ್ 148ರ ಶ್ರೀನಿವಾಗಿಲು 100 ಅಡಿ ರಸ್ತೆಯಿಂದ ಹರಿಜನ ಕಾಲೋನಿ ಡಿಫೆನ್ಸ್ ಲ್ಯಾಂಡ್ ಹತ್ತಿರ ಆರ್.ಸಿ.ಸಿ ಡಾಕ್ಸ್ ಮೋರಿ ನಿರ್ಮಾಣ	50.00
ಪಿ-3556	ವಾರ್ಡ್ 148ರ ಶ್ರೀನಿವಾಗಿಲು ಈಜಿಪುರ ಹರಿಜನ ಕಾಲೋನಿಯಲ್ಲಿ ಅಂಗನವಾಡಿ ಕೇಂದ್ರ ನಿರ್ಮಾಣ	50.00
ಪಿ-3557	ದೇವರ ಜೀವನಹಳ್ಳಿಯ ಎಸ್.ಸಿ/ಎಸ್.ಟಿ ಜನರು ವಾಸಿಸುವ ಪ್ರದೇಶದಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳು	2000.00
ಪಿ-3496	ಡಿ.ಜೆ.ಹಳ್ಳಿ ಸುತ್ತಮುತ್ತಲಿನ ಪರಿಶಿಷ್ಟ ಜನರು ವಾಸಿಸುವ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳು	1000.00
ಪಿ-3497	ವಾರ್ಡ್ 47ರ ವರಲಕ್ಷ್ಮೀನಗರ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿ	200.00
ಪಿ-3511	ಡಿ.ಜೆ.ಹಳ್ಳಿ ದೊಡ್ಡಣ್ಣನಗರ/ಇ ಬ್ಲಾಕ್‌ನ ಎಸ್.ಸಿ/ಎಸ್.ಟಿ ಜನರು ವಾಸಿಸುವ ಪ್ರದೇಶಗಳ ವಿಶೇಷ ಅಭಿವೃದ್ಧಿ ಕಾಮಗಾರಿಗಳು	1000.00
ಪಿ-3409	ಕರ್ನಾಟಕ ಸರ್ಕಾರ-ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಲ್ಯಾಣ ಚಟುವಟಿಕೆಗಳು-ಮೂಲ ಭೂತ ಸೌಕರ್ಯಗಳು (ಸಾಮಾಜಿಕ ಕಾರ್ಯಕ್ರಮ) ಎಸ್‌ಎಫ್‌ಸಿ ಅನ್ಟೈಡ್ ಎಸ್‌ಸಿ-ಎಸ್‌ಪಿ/ಟಿಎಸ್‌ಪಿ ಅನುದಾನ ಕಾಮಗಾರಿ (SFC Untied SC-SP/TSP Grant Works) - ಸದರಿ ಕಾರ್ಯಕ್ರಮಗಳನ್ನು 2018-19 ನೇ ಸಾಲಿನ ಆಯವ್ಯಯ ಪುಸ್ತಕದ ಅನುಬಂಧ-3 ರಲ್ಲಿ ಹಂಚಿಕೆ ಮಾಡಿರುವ ಅನುದಾನದಂತೆ ಕ್ರಮವಹಿಸುವುದು.	6500.00

15. ಪಿ-2337 ರ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದ ಅಡಿಯಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ನಿಗಧಿಪಡಿಸಿರುವ ರೂ.2700.00 ಲಕ್ಷಗಳ ಅನುದಾನದಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಕ್ಕೆ ರೂ.100.00 ಲಕ್ಷಗಳನ್ನು ಕೇಂದ್ರ ಕಛೇರಿಯಿಂದ ನಿರ್ವಹಿಸಲು ನಿಗಧಿಪಡಿಸಿದ್ದು, ಸದರಿ ಪಿ-ಕೋಡ್‌ನಲ್ಲಿನ ಉಳಿಕೆ ಅನುದಾನದ ಮೊತ್ತ ರೂ.2600.00 ಲಕ್ಷಗಳನ್ನು ಎಲ್ಲಾ ಎಂಟು ವಲಯಗಳಿಗೆ ವಾರ್ಡ್ ಸಂಖ್ಯೆಗಳಿಗೆ ಅನುಗುಣವಾಗಿ ಹಂಚಿಕೆ ಮಾಡಲು ನಿರ್ಣಯಿಸಿದೆ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

16. ಪಿ-0568 ರಟ್ಟೈಲರಿಂಗ್/ನಿಟ್ಟಿಂಗ್/ಎಂಬ್ರಾಯಿಡರಿ/ಕಾಯರ್ ತರಬೇತಿ ಕೇಂದ್ರಗಳ ಸಿಬ್ಬಂದಿಗಳಿಗೆ ಗೌರವ ಧನ ಕಾರ್ಯಕ್ರಮದ ಅಡಿಯಲ್ಲಿ ನಿಗಧಿಪಡಿಸಿರುವ ರೂ.200.00 ಲಕ್ಷಗಳು ಮತ್ತು ಪಿ-0570 ರ ಟೈಲರಿಂಗ್/ ನಿಟ್ಟಿಂಗ್/ಎಂಬ್ರಾಯಿಡರಿ/ಕಾಯರ್ ತರಬೇತಿ ಕೇಂದ್ರಗಳ ಬಾಡಿಗೆ ಕಾರ್ಯಕ್ರಮದ ಅಡಿಯಲ್ಲಿ ನಿಗಧಿಪಡಿಸಿರುವ ರೂ.25.00 ಲಕ್ಷಗಳ ಅನುದಾನಗಳನ್ನು ಎಲ್ಲಾ ಎಂಟು ವಲಯಗಳಿಗೆ ವಾರ್ಡ್ ಸಂಖ್ಯೆಗಳಿಗೆ ಅನುಗುಣವಾಗಿ ಹಂಚಿಕೆ ಮಾಡಲು ನಿರ್ಣಯಿಸಿದೆ

17. ಪಿ-2340ರ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ ಪಕ್ಕಾ ಮನೆ ನಿಮಾಣ ಕಾರ್ಯಕ್ರಮದ ಅಡಿಯಲ್ಲಿ ರೂ.4700.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದ್ದು, ಪಕ್ಕಾ ಮನೆ ನಿರ್ಮಾಣಕ್ಕೆ ಪ್ರತಿ ಮನೆಗೆ ರೂ.5.00 ಲಕ್ಷಗಳ ಸಹಾಯಧನವನ್ನು ಮೀಸಲಿರಿಸಿದ್ದು, ಇದರಲ್ಲಿ ರೂ. 4.50 ಲಕ್ಷಗಳನ್ನು ಪ್ರತಿ ಪಕ್ಕಾ ಮನೆ ನಿರ್ಮಾಣಕ್ಕೆ ನಿಗಧಿಪಡಿಸಿದೆ. ಉಳಿದ ರೂ 50.00 ಸಾವಿರಗಳನ್ನು ಸದರಿ ಮನೆಗೆ ಸೋಲಾರ್ ವಾಟರ್ ಹೀಟರ್‌ನ್ನು ಅಳವಡಿಸಲು ನಿಗಧಿಪಡಿಸಿದೆ.

ವಸತಿ ಕಾಮಗಾರಿಗಳನ್ನು ಕಾಮಗಾರಿ ಶಾಖೆಯಿಂದ ವಲಯ ಮುಖ್ಯ ಅಭಿಯಂತರರು, ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ವರ್ಗವಾರು ಪ್ರಸ್ತಾವನೆಗಳನ್ನು ಒಳಗೊಂಡ ವಾರ್ಡ್/ಉಪ ವಿಭಾಗ/ವಿಭಾಗೀಯ/ವಲಯವಾರು ಕಾಮಗಾರಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಮುಚ್ಚಯ ಮಾರ್ಗದಲ್ಲಿ ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿದೆ.

ಸದರಿ ಯೋಜನೆಯಲ್ಲಿ ಪೂರ್ಣಗೊಂಡ ಮನೆಗಳಿಗೆ ನಿಗಧಿತ ಸಮಯದಲ್ಲಿ 4ಜಿ ವಿನಾಯಿತಿ ಹೊಂದಿರುವ ಸಂಸ್ಥೆ/ಟೆಂಡರ್ ನಿಯಮಾವಳಿಗಳ ಅನುಸಾರ ಸೋಲಾರ್ ವಾಟರ್ ಹೀಟರ್‌ನ್ನು ಅಳವಡಿಸುವ ಸಲುವಾಗಿ ಕೇಂದ್ರ ಕಛೇರಿಯ ಕಲ್ಯಾಣ ವಿಭಾಗದಿಂದ ಕ್ರಮ ಕೈಗೊಳ್ಳಲು ತೀರ್ಮಾನಿಸಿದೆ.

18. ಪಿ-2583ರ ರಾತ್ರಿ ತಂಗುದಾಣಗಳ ನಿರ್ಮಾಣ ಮತ್ತು ನಿರ್ವಹಣೆಯ ಅಡಿಯಲ್ಲಿ ರೂ 250.00 ಲಕ್ಷಗಳನ್ನು ನಿಗಧಿಪಡಿಸಿದ್ದು ಸದರಿ ಅನುದಾನದಲ್ಲಿ ಪುಲಿಕೇಶಿನಗರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಗೆ ರೂ 50.00ಲಕ್ಷಗಳು, ವಾರ್ಡ್ ಸಂಖ್ಯೆ 112 ಡೊಮ್ಮಲೂರು ವಾರ್ಡ್‌ಗೆ ರೂ.75.00ಲಕ್ಷಗಳು ಹಾಗೂ ವಾರ್ಡ್ ಸಂಖ್ಯೆ 5-ಜಕ್ಕೂರು ವಾರ್ಡಿಗೆ ರೂ.77.00 ಲಕ್ಷಗಳನ್ನು ಹೊಸ ರಾತ್ರಿ ತಂಗುದಾಣ ಕೇಂದ್ರಗಳನ್ನು ನಿರ್ಮಿಸಲು ಮೀಸಲಿರಿಸಿದ್ದು, ಉಳಿಕೆ ಅನುದಾನ ರೂ.48.00ಲಕ್ಷಗಳನ್ನು ಹಾಲಿ ಚಾಲನೆಯಲ್ಲಿರುವ 6 ಕೇಂದ್ರಗಳ ನಿರ್ವಹಣೆಗೆ ಪ್ರತಿ ಕೇಂದ್ರಕ್ಕೆ ರೂ. 8.00 ಲಕ್ಷಗಳಂತೆ ಸಮನಾಗಿ ಹಂಚಿಕೆ ಮಾಡಿದ್ದು, ಸದರಿ ಕೇಂದ್ರಗಳ ನಿರ್ವಹಣೆಗೆ ಹೆಚ್ಚುವರಿ ಅನುದಾನದ ಅವಶ್ಯಕತೆಯಿದ್ದಲ್ಲಿ ನಿಯಮಾನುಸಾರ ನಲ್ಮ್ ಯೋಜನೆಯ ಅನುದಾನದಲ್ಲಿ ಭರಿಸಲು ನಿರ್ಣಯಿಸಿದೆ ಹಾಗೂ *ನಲ್ಮ್ ಯೋಜನೆಯ ಮಾರ್ಗಸೂಚಿಯನ್ವಯ ಪ್ರತೀ ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ ಒಂದರಂತೆ ರಾತ್ರಿ ತಂಗುದಾಣಗಳನ್ನು ಡೇ-ನಲ್ಮ್ ಯೋಜನೆಯ ಅಡಿಯಲ್ಲಿ ನಿರ್ಮಿಸಲು ನಿಯಮಾನುಸಾರ ಕ್ರಮಕೈಗೊಳಗಳುವುದು*

19. ಪಿ-3444, ಪಿ-3157, ಪಿ-3542, ಪಿ-3160 ರ ಈ ಕೆಳಕಂಡ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ ಪಕ್ಕಾ ಮನೆ ನಿರ್ಮಾಣ ಕಾರ್ಯಕ್ರಮಗಳಿಗೆ ಪ್ರತಿ ಮನೆಗೆ ರೂ.5.00 ಲಕ್ಷಗಳ ಸಹಾಯಧನವನ್ನು ನಿಗಧಿಪಡಿಸಿದ್ದು, ಇದರಲ್ಲಿ 4.50 ಲಕ್ಷಗಳನ್ನು ಪ್ರತೀ ಮನೆ ನಿರ್ಮಾಣಕ್ಕೆ ನಿಗಧಿಪಡಿಸಿದೆ. ಉಳಿದ ರೂ 50.00 ಸಾವಿರಗಳನ್ನು ಸದರಿ ಮನೆಗೆ ಸೋಲಾರ್ ವಾಟರ್ ಹೀಟರ್‌ನ್ನು ಅಳವಡಿಸಲು ನಿಗಧಿಪಡಿಸಿದೆ. ಸದರಿ ಮನೆಗಳಿಗೆ ನಿಗಧಿತ ಸಮಯದಲ್ಲಿ 4ಜಿ ವಿನಾಯಿತಿ ಹೊಂದಿರುವ ಸಂಸ್ಥೆ/ಟೆಂಡರ್ ನಿಯಮಾವಳಿಗಳ ಅನುಸಾರ ಸೋಲಾರ್ ವಾಟರ್ ಹೀಟರ್‌ನ್ನು ಅಳವಡಿಸಲು ತೀರ್ಮಾನಿಸಿದೆ.

ವಸತಿ ಕಾಮಗಾರಿಗಳನ್ನು ಹಾಗೂ ಸೋಲಾರ್ ವ್ಯವಸ್ಥಗಳನ್ನು ಕಾಮಗಾರಿ ಶಾಖೆಯಿಂದ ವಲಯ ಮಟ್ಟದಲ್ಲಿಯೇ ನಿಯಮಾನುಸಾರ ಎಲ್ಲಾ ರೀತಿಯ ಕ್ರಮ ಕೈಗೊಂಡು ಅನುಷ್ಠಾನಗೊಳಿಸಲು ತೀರ್ಮಾನಿಸಿದೆ.

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿ

1	ಪಿ-3444	ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಮನೆಗಳ ನಿರ್ಮಾಣ:- ವಾರ್ಡ್ 102,74,44,67,68,75,ರೂ. 2.00 ಕೋಟಿ ಪ್ರತಿ ವಾರ್ಡಿಗೆ.	1200.00
2	ಪಿ-3157	ಯಶವಂತಪುರದ ಹಿಂದುಳಿದ ವರ್ಗಗಳ/ಅಲ್ಪಸಂಖ್ಯಾತ/ಆರ್ಥಿಕ ಹಿಂದುಳಿದ ವರ್ಗದವರಿಗೆ ವೈಯಕ್ತಿಕ ಮನೆ ನಿರ್ಮಾಣ ಎರಡನೇ ಹಂತ.	1000.00
3	ಪಿ-3542	ವಾರ್ಡ್ 38-ರಲ್ಲಿ ಆರ್ಥಿಕವಾಗಿ-ಹಿಂದುಳಿದ-ವರ್ಗಗಳ-ವೈಯಕ್ತಿಕ-ಮನೆ-ನಿರ್ಮಾಣ.	300.00
4	ಪಿ-3160	ಶಂಕರಮಠ ಹಿಂದುಳಿದ ವರ್ಗಗಳ/ಅಲ್ಪಸಂಖ್ಯಾತ/ಆರ್ಥಿಕ ಹಿಂದುಳಿದ ವರ್ಗದವರಿಗೆ ವೈಯಕ್ತಿಕ ಮನೆ ನಿರ್ಮಾಣ.	200.00
5	ಪಿ-3410	ವಾರ್ಡ್ 75ರ ಹಿಂದುಳಿದ ವರ್ಗದ ಮನೆಗಳಿಗೆ ಸೋಲಾರ್./ಎಲ್‌ಇಡಿ ಒದಗಿಸುವುದು.	200.00

20. ಆರ್ಥಿಕವಾಗಿ ಹಿಂದುಳಿದ ವರ್ಗದವರ ಪಿ-3432 ರ ಬೀದಿ ಬದಿ ವ್ಯಾಪಾರಕ್ಕೆ ಸ್ಥಳದ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ನಿಗಧಿಪಡಿಸಿರುವ ರೂ.200.00 ಲಕ್ಷಗಳ ಅನುದಾನವನ್ನು ಈಗಾಗಲೇ ಪಾಲಿಕೆಯಲ್ಲಿ ಗುರುತಿಸಿರುವ ಬೀದಿ ಬದಿ ವ್ಯಾಪಾರಿಗಳಿಗೆ ಅಗತ್ಯವಾಗಿ ಬೇಕಾಗಿರುವ ಸಲಕರಣೆಗಳಾದ ಎಲೆಕ್ಟ್ರಾನಿಕ್ ತಕ್ಕಡಿ, ಸೋಲಾರ್/ರೀಚಾರ್ಜಬಲ್ ಲೈಟ್, ಟಾರ್ಪಾಲು, ಬಾಕ್ಸ್, ಛತ್ರಿ ಹಾಗೂ ಇತ್ಯಾದಿಗಳನ್ನು ಒದಗಿಸಲು ಮತ್ತು ಪಿ-3287 ರ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಆರ್ಥಿಕ ಸಹಾಯ ಕಾರ್ಯಕ್ರಮದ ಅಡಿಯಲ್ಲಿ ನಿಗಧಿಪಡಿಸಿರುವ ರೂ.200.00 ಲಕ್ಷಗಳ ಅನುದಾನವನ್ನು ಎಲ್ಲಾ ಎಂಟು ವಲಯಗಳಿಗೆ ವಾರ್ಡ್ ಸಂಖ್ಯೆಗಳಿಗೆ ಅನುಗುಣವಾಗಿ ಹಂಚಿಕೆ ಮಾಡಲು ನಿರ್ಣಯಿಸಿದೆ.

